**ಸಿ.ಸಿ.ನಂ.2171 /2021**
**ಸಿಡಬ್ಲ್ಯು: 06 ಪಿಡಬ್ಲ್ಯು:02**

**ಮೇ: ಹೆಚ್ಚುವರಿ ಹಿರಿಯ ಸಿವಿಲ್ ವ ಜೆ.ಎಮ್.ಎಫ್.ಸಿ. ನ್ಯಾಯಾಲಯ ಬಸವನ-ಬಾಗೇವಾಡಿ**

| | | |
|---|---|---|
| ಸಾಕ್ಷಿದಾರರ ಹೆಸರು | : | ಕಿಶೋರಕುಮಾರ ಪೈಕಿಕರೆ |
| ತಂದೆ/ಗಂಡ ಹೆಸರು | : | ಮಾರುತಿ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಕಳಮನಿ ತಾ: ಸೋಲಾಪುರ |

**ಸಾಕ್ಷಿಯನ್ನು ಇಂದು ದಿನಾಂಕಃ 04-08-2025. ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು. ಸಾಕ್ಷಿಗೆ ಕನ್ನಡ ಭಾಷೆ ಬಾರದರಿಂದ ಮತ್ತು ಮರಾಠಿ ಭಾಷೆಯಲ್ಲಿ ಮಾತನಾಡುತ್ತಿದ್ದರಿಮದ ಜಿ.ಬಿ.ಪಿ ವಕೀಲರನ್ನು ಅನುವಾದಕರು ಅಂತಾ ನೇಮಿಸಿಕೊಂಡು**
**ಮುಖ್ಯ ವಿಚಾರಣೆ: ಎ.ಪಿ.ಪಿ.ಯವರಿಂದ**

1) ಚಾಸಾ-1 ಪರಿಚಯ ಇಲ್ಲ. 2 ನೇ ಆರೋಪಿ ಪರಿಚಯ ಇಲ್ಲ.

2) ನಾನು 2 ನೇ ಆರೋಪಿ ಲಾರಿಯಲ್ಲಿ ಮಲಗಿಕೊಂಡು ಹೋಗುತ್ತಿರುವಾಗ ಸುಮಾರು 2-3 ವರ್ಷಗಳ ಹಿಂದೆ ಬೆಂಗಳೂರಿಗೆ ಹೋಗುತ್ತಿರುವಾಗ ಚಾಸಾ-1 ನಮ್ಮ ಟ್ರಕ ಚಲಿಸುತ್ತಿರುವಾಗ ಹಿಂದಿನಿಂದ ಕಾರು ಬಂದು ಲಾರಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿತ್ತು ಅಂತಾ ನನಗೆ ತಿಳಿಸಿದ್ದನು. ಸದರಿ ಅಪಘಾತದ ಸ್ಥಳ ಎಲ್ಲಿ ಅಂತಾ ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ಕಾರು ಹಿಂದಿನಿಂದ ಬಂದು ಡಿಕ್ಕಿ ಪಡಿಸಿದ್ದರಿಂದ ನಾವು ಚಲಿಸುತ್ತಿದ್ದ ಲಾರಿ ಟಾಯರ ಬಸ್ಟ ಆಗಿತ್ತು. ಅಪಘಾತವಾದ ನಂತರ ನಾವು ಗಾಬರಿಗೊಂಡು ಬಸ್ಸ ಮೂಲಕ ಮರಳಿ ಬಂದಿದ್ದೆ ಮುಂದೆ ಏನಾಯಿತು ಅಂತಾ ನನಗೆ ಮಾಹಿತಿ ಇಲ್ಲ. ನಾವು ಚಲಿಸುತ್ತಿದ್ದ ಲಾರಿ ನೊಂದಣಿ ಸಂ.MH-13/CU-3022 ಅಂತಾ ಇತ್ತು. ಅಪಘಾತ ಪಡಿಸಿದ ಕಾರ ನೊಂದಣಿ ಸಂಖ್ಯೆ ಮಾಹಿತಿ ಇಲ್ಲ. ಆಗ ಪೋಲಿಸರು ಸ್ಥಳಕ್ಕೆ ಬಂದಿದ್ದರು. ಪೋಲಿಸರು ಬಂದು ಏನು ಮಾಡಿದ್ದರು ಅಂತಾ ನನಗೆ ಮಾಹಿತಿ ಇಲ್ಲ. ಪೋಲಿಸರ ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ಹೇಳಿಕೆ ನೀಡಿರುವುದಿಲ್ಲ.

3) ಸಾಕ್ಷಿಗೆ ಎರಡು ಛಾಯಾ ಚಿತ್ರ ಅವುಗಳಲ್ಲಿ ತಾನು ಇರುವುದಾಗಿ ನೋಡಿ ಗುರುತಿಸಿದ್ದ ಮೇರೆಗೆ ಅವುಗಳನ್ನು ಕ್ರಮವಾಗಿ ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು.

4) ಸದರಿ ಛಾಯಾ ಚಿತ್ರಗಳನ್ನು ಅಪಘಾತವಾದ ದಿನದಂದು ಅಪಘಾತವಾದ ಸ್ಥಳದಲ್ಲಿ ತೆಗೆದುಕೊಂಡಿದ್ದರು. ಸಾಕ್ಷಿ ಮುಂದುವರೆದು ವಾಹನದಲ್ಲಿ ಯಾರು ಯಾರು ಇದ್ದಿರಿ ಬಂದು ನಿಲ್ಲಿರಿ ಅಂತಾ ಸದರಿ ಛಾಯಾ ಚಿತ್ರ ತೆಗೆದುಕೊಂಡಿದ್ದರು ಎಂದು ನುಡಿಯುತ್ತಾರೆ.

(ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲುಃ ಎಪಿಪಿ ರವರರಿಂದ</u>**

4) ನಾನು ಮತ್ತು ಚಾಸಾ-1 ಮತ್ತು ಚಾಸಾ-14 ಸೇರಿ  ಈರುಳ್ಳಿಯನ್ನು ಲಾರಿಯಲ್ಲಿ ಬೆಂಗಳೂರಗೆ ತೆಗೆದುಕೊಂಡು ಹೊರಟಿದ್ದೇವು ಎಂದರೆ ಸರಿ. ದಿ:30-03-2021 ರಂದು ಸಂಜೆ 7.30 ಗಂಟೆಗೆ ವಾಡಿಯಿಂದ ಬೆಂಗಳೂರಿಗೆ ಈರುಳ್ಳಿ ಲೋಡನ್ನು ತೆಗೆದುಕೊಂಡು ಹೊರಟಿದ್ದೇವು ಎಂದರೆ ಸರಿ. ಸದರಿ ಲಾರಿಯಲ್ಲಿ ನಾನು,  ಚಾಸಾ-1 ಮತ್ತು ಚಾಸಾ-14 ಇದ್ದು 2 ನೇ ಆರೋಪಿ ಲಾರಿ ಚಲಾಯಿಸುತ್ತಿದ್ದ ಎಂದರೆ ಸರಿ. ದಿ:31-03-2021 ರಂದು ಎನ್‌ಎಚ್-50 ರಸ್ತೆ ಮೇಲೆ ಮನಗೂಳಿ ದಾಟಿದ 2-3 ಕಿ.ಮೀ ನಂತರ ಒಂದು ಪೆಂಟ್ರೋಲ ಪಂಪ ಹತ್ತಿರ ಹೋಗುತ್ತಿರುವಾಗ ಬೆಳಿಗ್ಗೆ 8.30 ಗಂಟೆಗೆ ಲಾರಿಯ ಟಾಯರಗಳು ಬಸ್ಟ ಆಗಿದ್ದರಿಂದ ಸದರಿ ಲಾರಿಯನ್ನು 2 ನೇ ಆರೋಪಿ ನಿಲ್ಲಿಸಿದ್ದಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಲಾರಿ ಚಲಿಸುತ್ತಿತ್ತು ಎಂದು ನುಡಿಯುತ್ತಾರೆ. 2 ನೇ ಆರೋಪಿ ಲಾರಿಯ ಟಾಯರಗಳು ಹೊಡೆದಿದ್ದರಿಂದ ರಸ್ತೆಯಲ್ಲಿ ತನ್ನ ಲಾರಿಯನ್ನು ಯಾವುದೇ ಇಂಟಿಕೇಟರ ಹಾಕದೇ ನಿಲ್ಲಿಸಿದ್ದಾಗ ವಿಜಯಪುರ ಕಡೆಯಿಂದ ಒಂದು ಕಾರ ಚಾಲಕ ಅತೀ ಜೋರಾಗಿ ತನ್ನ ಕಾರನ್ನು ಚಲಾಯಿಸಿಕೊಂಡು ಬಂದು ಹಿಂದಿನಿಂದ ನಾವು ನಿಲ್ಲಿಸಿದ ಲಾರಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದಾ ಎಂದರೆ ಸಾಕ್ಷಿ ತಾನು ಸದರಿ ಟ್ರಕನಲ್ಲಿ ತಾನು ಮಲಗಿಕೊಂಡಿದ್ದರಿಂದ ತನಗೆ ಆ ಕುರಿತು ಮಾಹಿತಿ ಇಲ್ಲ. ಆದರೆ ಅಪಘಾತದ ಕುರಿತು ಆ ನಂತರ ನನಗೆ ಚಾಸಾ-1 ರವರು ತಿಳಿಸಿದ್ದರು ಎಂದು ನುಡಿಯುತ್ತಾರೆ. ಅಪಘಾತವಾದಗ ಬೆಳಿಗ್ಗೆ 9.00 ಗಂಟೆ ಆಗಿತ್ತು ಎಂದರೆ ಸಾಕ್ಷಿ 7 ರಿಂದ 8 ಗಂಟೆ ಆಗಿತ್ತು ಎಂದು ನುಡಿಯುತ್ತಾರೆ.  ಸದರಿ ಕಾರ ಚಾಲಕ ನಂಬರ ನೋಡಿದ್ದಾಗ ಅದರ ನೊಂದಣಿ ಸಂ.KA-35-B-8766 ಅಂತಾ ಇತ್ತು ಎಂದರೆ ಮಾಹಿತಿ ಇಲ್ಲ. ಸದರಿ ಕಾರಿನ ಬಳಿ ನಾವು ಹೋಗಿ ನೋಡಿದ್ದಾಗ ಅದರಲ್ಲಿ ಚಾಲಕ ಮಾತ್ರ ಇದ್ದು ಆಗ ನಾವು ಕೂಡಿದ ಜನ ಸೇರಿಕೊಂಡು 108 ಅಂಬುಲೇನ್ಸ ಕರೆ ಮಾಡಿ ಸದರಿ ಚಾಲಕನ್ನು ಹೊರಗೆ ತೆಗೆದಿದ್ದು ಆಗ ಅವನು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಅವನ ಮುಖಕ್ಕೆ, ಹಣಗೆ ಬಾರಿ ಗಾಯವಾಗಿ ರಕ್ತ ಬರುತ್ತಿತ್ತು ಎಂದರೆ ಸಾಕ್ಷಿ ಅಪಘಾತವನ್ನು ನೋಡಿ ನನಗೆ ತಲೆ ಸುತ್ತು ಬಂದಿದ್ದರಿಂದ ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಅಂಬುಲೇನ್ಸ ವಾಹನದಲ್ಲಿ ಇದ್ದ ಜನರು ಮತ್ತು ಈತರ ನೇರದಿದ್ದ ಜನರ ಸದರಿ ಕಾರ ಚಾಲಕನ ಗುರುತಿನ ಚೀಟಿಗಳನ್ನು ಪರಿಶೀಲನೆ ಮಾಡಿ ನೋಡಿದ್ದಾಗ ಆತನ ಹೆಸರು ಶ್ರೀನಿವಾಸ ತಂ.ಕುಬೇರ ಗುಪ್ತಾ ಅಂತಾ ಮತ್ತು ಆತ ಹೊಸಪೇಟದವನು ಅಂತಾ ಸದರಿ ಜನರು ನನಗೆ ಹೇಳಿದ್ದರು ಎಂದರೆ ಸಾಕ್ಷಿ ಆತ ಬಳ್ಳಾರಿದವನು ಎಂದು ನುಡಿಯುತ್ತಾರೆ.

ಸದರಿ ಕಾರ ಚಾಲಕನನ್ನು ಅಂಬುಲೇನ್ಸ ವಾಹನದಲ್ಲಿ ಉಪಚಾರಕ್ಕಾಗಿ ವಿಜಯಪುರಕ್ಕೆ ತೆಗೆದುಕೊಂಡು ಹೋಗಿದ್ದರು ಎಂದರೆ ಅಂಬುಲೇನ್ಸ ವಾಹನದಲ್ಲಿ ಆತನನ್ನು ಹಾಕಿದ್ದು ಮಾತ್ರ ಗೊತ್ತು ಮುಂದೆ ಎಲ್ಲಿ ತೆಗೆದುಕೊಂಡು ಹೋದರು ಅಂತಾ ಸಾಕ್ಷಿ ನುಡಿಯುತ್ತಾರೆ. 2 ನೇ ಆರೋಪಿ ತನ್ನ ಲಾರಿಯನ್ನು ರಸ್ತೆ ಮೇಲೆ ಯಾವುದೇ ಇಂಡಿಕೇಟರ ಹಾಕದೇ ನಿಲ್ಲಿಸಿದ್ದರಿಂದ ಮತ್ತು ಕಾರ ಚಾಲಕ ತನ್ನ ಕಾರನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು ಸದರಿ ಲಾರಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿಕೊಂಡಿದ್ದರಿಂದ ಚಾಸಾ-1 ರವರು ಆರೋಪಿತರ ವಿರುದ್ಧ ಮನಗೂಳಿ ಪೋಲಿಸ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಮಾಹಿತಿ ಇಲ್ಲ. ಕಾರ ಚಾಲಕ ಶ್ರೀನಿವಾಸ ಗುಪ್ತಾ ಈತನು ಬೆಳಗಾವಿ ಕೆ.ಎಲ್.ಈ ಆಸ್ಪತ್ರೆಯಲ್ಲಿ ರಾತ್ರಿ 8.30 ಗಂಟೆ ಚಿಕಿತ್ಸೆ ಪಡೆಯುತ್ತಿರುವಾಗ ತೀರಿಕೊಂಡಿರುತ್ತಾನೆ ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ನನಗೆ ಕನ್ನಡ ಮಾತನಾಡಲುಬಾರದರಿಂದ ನಾನು ಹಿಂದಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ಅನುವಾದಿಸಿಕೊಂಡು ನನ್ನ ಹೇಳಿಕೆಯನ್ನು ಕನ್ನಡದಲ್ಲಿ ಬೆರಳಚ್ಚು ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಹೆಸರು ಕೇಳಿ ಛಾಯಾ ಚಿತ್ರ ತೆಗೆದುಕೊಂಡಿದ್ದರು ಅಂತಾ ನುಡಿಯುತ್ತಾರೆ. ಮುಂದುವರೆದು ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಪೋಲಿಸರು ಮುಂದೆ ನನ್ನ ಹೇಳಿಕೆಯನ್ನು ದಾಖಲಿಸಿರುತ್ತೇನೆ ಎಂದರೆ ಸಾಕ್ಷಿ ಲಾರಿ ಮಾಲೀಕ ಹೇಳಿಕೆ ನೀಡಿದ್ದರು ಎಂದು ನುಡಿಯುತ್ತಾರೆ. ಸದರಿ ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ನಾನು ಸದರಿ ಟ್ರಕನಲ್ಲಿ ಪ್ರಯಾಣಸುತ್ತಿದ್ದರಿಂದ ಮತ್ತು ಆರೋಪಿ ನನಗೆ ಪರಿಚಯ ಇದ್ದುದ್ದರಿಂದ 2 ನೇ ಆರೋಪಿಯನ್ನು ಶಿಕ್ಷೆಯಿಂದ ಪಾರು ಮಾಡಲು ನಿಪಿ-12 ರಂತೆ ಹೇಳಿಕೆ ನೀಡಿದ್ದರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

5) ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಕೊಂಡಿರುವುದಿಲ್ಲ.

**ಮರುವಿಚಾರಣೆ ಇಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.